"SATYAVANI" Founded 1917 Regd. No. M. 1299

ಸತ್ಯವಾಣಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 23 | ಬುಧವಾರ 10—10—45 | ಬಿಡಿ ಪ್ರತಿ 3 ಪೈ

ವಾರ್ತಾತರಂಗ

ಸಿಂಗಪುರದಲ್ಲಿ ಭಾರತೀಯ ರಾಷ್ಟ್ರೀಯ ಸೈನ್ಯವು ಯುದ್ಧ ಖೈದಿಗಳೆಂಬ ಆರೋಪಣೆ ಮೇರೆ ಬಂಧಿಸಲ್ಪಟ್ಟಿರುವುದಾಗಿ ವರದಿಯಾಗಿದೆ.

o o

ಫ್ರಾನ್ಸಿನಲ್ಲಿ ಲಾವೆಲ್ಲರ ವಿಚಾರಣೆ ಮುಗಿಯುತ್ತಾ ಬಂದಿದೆ. ತಾ || 8 ರಲ್ಲಿ ಲಾವಲರು ಕೋರ್ಟಿಗೆ ಬರಲು ನಿರಾಕರಿಸಿದರು. ಅವರ ಪರ ಲಾಯರುಗಳೂ ಇರಲಿಲ್ಲ.

o o

ಈ ತಿಂಗಳು ಅರ್ಧ ರಾತ್ರಿ ನಂತರ 2 ಗಂಟೆ ಸಮಯದಲ್ಲಿ ಸ್ಟ್ಯಾಂಡರ್ಡ್ ಟೈಂ 1 ಗಂಟೆ ಹಿಂದಕ್ಕೆ ಇಡಲಾಗುವುದೆಂಬ ಭಾರತ ಸರ್ಕಾರದ ಪ್ರಕಟಣೆ. 1942 ನೇ ಸೆಪ್ಟಂಬರ್ 1 ರಿಂದ 1 ಗಂಟೆ ಮುಂದೆ ಹಾಕಲಾಗಿತ್ತು.

o o

ತುಮಕೂರಿನಲ್ಲಿ ಕಳೆದ ಪೌರಸಭಾ ಮಾಟಿಂಗಿನಲ್ಲಿ ಆ ಊರಿನ ನೀರಿನ ಸರ್ಕಾರ್ಕೆ 150000 ರೂ. ಯೋಜನೆಯೊಂದು ಅಂಗೀಕರಿಸಲಾಯಿತು.

o o

ಶಿವಮೊಗ್ಗಾ ಪೌರಸಭೆಯವರು ಐದೂವರೆ ಲಕ್ಷ ರೂ ಖರ್ಚಿನಿಂದ ಭೂಮಿಯೊಳಗೆ ಚರಂಡಿ ಮಾಡಲು ತೀರ್ಮಾನಿಸಿರುವರು.

o o

ಜಪಾನಿನ ಹೊಸ ಮಂತ್ರಿಮಂಡಲವು ವೈಕಾರ್ಥರಿಂದ ಅಂಗೀಕೃತವಾಗಿದೆ.

o o

ಮೈಸೂರು ಪ್ರಜಾಪಕ್ಷದ ಅಧಿವೇಶನವು ರಾಜಧಾನಿಯ ಟೌನ್‌ಹಾಲಿನಲ್ಲಿ ತಾ || 16 ರ ಬೆಳಿಗ್ಗೆ ನಡೆಯುವುದಾಗಿ ತಿಳಿಯಬಂದಿದೆ.

o o

ಮಧುಗಿರಿ ಸಬ್ ಜೈಲಿನಿಂದ ಕೆಲವು ದಿನಗಳ ಹಿಂದೆ ಇಬ್ಬರು ಖೈದಿಗಳು ಪರಾರಿಯಾಗಿರುವರೆಂದೂ, ಪೋಲೀಸರು ಪತ್ತೇ ತರಯೂದು ನಡೆಸುತ್ತಿರುವರೆಂದೂ ತಿಳಿಯಬಂದಿದೆ.

"ಸತ್ಯವಾದಿ"ಯ ಸ್ಥಾಪಕರ

ಸ್ಮಾರಕಕ್ಕಾಗಿ

ನಾಳೆ ಪತ್ರಿಕೆಗೆ ರಜಾ

ಪ್ರ. ಪ್ರ. ಸಭೆ ಪ್ರಾರಂಭ

ಕಾಂಗ್ರೆಸ್ ಪಕ್ಷದ ಸಭಾ ಪರಿತ್ಯಾಗ

ಪ್ರಜಾಪ್ರತಿನಿಧಿ ಸಭೆ

(ನಮ್ಮ ಖಾಸಗಿ ಪ್ರತಿನಿಧಿಯಿಂದ)

ಮೈಸೂರು ಅ 10

12-5 ಘಂಟೆಗೆ ಪ್ರಧಾನಶಿರೋಮಣಿ ದಿವಾನ್ ಶ್ರೀ ಮಾಧವರಾಯರ ಅಧ್ಯಕ್ಷತೆಯಲ್ಲಿ ಇಂದಿನ ದಸರಾ ಅಧಿವೇಶನವು ಪ್ರಾರಂಭವಾಯಿತು.

ಅಧ್ಯಕ್ಷರ ಭಾಷಣವಾಗಗೊಡದೆ ಕಾಂಗ್ರೆಸ್ ಪಕ್ಷದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಭಾಷಣಕ್ಕೆ ಮುನ್ನ ತಾವು ಮಾತನಾಡುವುದಾಗಿ ತಿಳಿಸಿದರು. ಅಧ್ಯಕ್ಷರು ಗಮನ ಕೊಡಲಿಲ್ಲ. ಪುನಃ ಶ್ರೀ ಸೀತಾರಾಮಯ್ಯನವರು ಅದೇ ಪ್ರಲಾಪವನ್ನು ಮಾಡಿದರು. 'ಭಾಷಣ ಪ್ರಾರಂಭವಾಗಿದೆ ಸಾಧ್ಯವಿಲ್ಲ' ಎಂದರು ಅಧ್ಯಕ್ಷರು. ಇದನ್ನು ಪ್ರತಿಭಟಿಸುವ ಸಲುವಾಗಿ ಶ್ರೀ ಸೀತಾರಾಮಯ್ಯನವರು ತಮ್ಮ ಪಕ್ಷ ದೊಡನೆ ಸಭಾಪರಿತ್ಯಾಗ ಮಾಡಿದರು.

ಸಭಾಪರಿತ್ಯಾಗ ನಡೆಯುತ್ತಿರುವಾಗ ಭವನದ ದೊಡ್ಡದಾದ ಬಾಗಿಲ ಹತ್ತಿರ ಕುಳಿತಿದ್ದ ಶ್ರೀ ಪಾವುಗಡ ಸಂಜುಂಡರಾಯರು 'ಅಧ್ಯಕ್ಷ ಭಾಷಣಕ್ಕೆ ಮುಂಚೆ ಏನೂ ಕೂಡದು' ಎಂದು ಪ್ರತಾಪರಾಣಿಯಲ್ಲಿ ನಡಿದರು.

ಅಧ್ಯಕ್ಷ ಭಾಷಣದ ಕನ್ನಡಾನುವಾದವನ್ನು ಶ್ರೀ ಬಿ. ಎಸ್. ರಾಜಾರಾಯರು ಓದಿದರು.

ಅಧ್ಯಕ್ಷ ಭಾಷಣಾನಂತರ ಕಾಂಗ್ರೆಸ್ ಪಕ್ಷವು ಸಭೆಗೆ ಬಂದಿತು. ಕಾಂಗ್ರೆಸ್ ಪಕ್ಷಕ್ಕೂ ಶ್ರೀ ಸಂಜುಂಡರಾಯರಿಗೂ ಕ್ರಿಯಾಲೋಪದ ಯುದ್ಧ ಪ್ರಾರಂಭವಾಯಿತು.

[ಅಧ್ಯಕ್ಷರ ಭಾಷಣದ ಸಾರಾಂಶವು ನಾಳೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು]

ರಾಜಾಜಿ ಭಾಷಣ

ಬೆಂಗಳೂರಿನಲ್ಲಿ ತಾ || 8 ರಲ್ಲಿ ಮದರಾಸಿದ ಶ್ರೀ ರಾಜಾಜಿಯವರು ಕಾಂಗ್ರೆಸ್ ಕಛೇರಿ ಅವರಣದಲ್ಲಿ, ಕಾಂ || ಅಷ್ಟಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮಾಡಿದ ಭಾಷಣದಲ್ಲಿ ಕ್ಯಾಸೂರಿದಲ್ಲಿ ಜವಾಬ್ದಾರಿ ಸರಕಾರದ ಅನಿವಾರ್ಯತೆ ವಿಷಯವನ್ನು ತಿಳಿಸಿದರು.

— ಅಣುಬಾಂಬಿನ ರಹಸ್ಯವನ್ನು ಇತರ ಜನಾಂಗಗಳಿಗೆ ತಿಳಿಸಲಾಗದೆಂದು ಪ್ರೈ || ಟ್ರೂಮನ್ನರು ಹೇಳಿದ್ದಾರೆ

— ಪ್ಯಾಲಿಸ್ಟೈನಿನ ಸಮಸ್ಯೆಯು ಅಖಿಲ ಮುಸ್ಲಿಂ ಪ್ರಪಂಚವನ್ನು ಎಬ್ಬಿಸಬಹುದೆಂದು ಬ್ರಿಟಿಸರ ಕಳವಳ

ಮಲೆಯಾದಲ್ಲಿ ಶರಣಾಗತರಾದ 2 ಲಕ್ಷ ಮುಂದಿ ಜನರು ಈಕ್ವೇಟರ್ ಹತ್ತಿರ ಜನರ ವಾಸವಿಲ್ಲದ ಸ್ಥಳಕ್ಕೆ ಕಳುಹಿಸಲ್ಪಡುವರು

ದೇಶವಾವುದೇ ಆಗಿರಲಿ ಸ್ವಾತಂತ್ರ್ಯ ಪ್ರಶ್ನೆಯೆಲ್ಲಾ ಒಂದೇ

ಅದಕ್ಕಾಗಿ ಸೇವೆ ಸಲ್ಲಿಸಲು ನಾನು ಸಿದ್ಧನಿದ್ದೇನೆ

ಡಾ || ಸೊಕರ್ನೋ ಆಹ್ವಾನದ ಒಗ್ಗೆ ನೆಹರೂರವರ ಅನೋಘ ಹೇಳಿಕೆ

ಲಕ್ನೋ, ತಾ 8

'ಭಾರತ ದೇಶದಲ್ಲಿ ಯಾವುದೇ ಅವಶ್ಯಕ ಕಾರ್ಯವಿರಲಿ, ನಾನು ಜಾವಾಕ್ಕೆ ಭೇಟಿಕೊಡಲು ತಯಾರಾಗಿದ್ದೇನೆ. ದೇಶವಾವುದಾದರೇನು ! ಸ್ವಾತಂತ್ರ್ಯ ಸ್ಪರ್ಧೆಯೆಲ್ಲಾ ಒಂದೇ ! ನನ್ನಿಂದ ಇಂಡೋನೇಷಿಯರಿಗೆ ಕೈಲಾದ ಸೇವೆ ಅವರ ಸ್ವಾತಂತ್ರ್ಯ ಸಮರದಲ್ಲಿ ಅವಶ್ಯವಿದ್ದರೆ ಕೊಡುವೆನು. ಡಾ || ಸುಕರ್ನೋ ಮುಂತಾದವರು ಸ್ವಾತಂತ್ರ್ಯ ಲಕ್ಷ್ಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಲಿ ಎಂಬುದಾಗಿ ಡಾ || ಸುಕರ್ನೋ ಆಹ್ವಾನವನ್ನು ಕುರಿತು ಪಂಡಿತ್ ನೆಹರೂ ಹೇಳಿಕೆಯಿತ್ತಿದ್ದಾರೆ.

ಶ್ರೀ ಅಪ್ಪಾಜಿಗೌಡರಿಗೆ ರಜಾ

ಶ್ರೀ ಜೆ ಅಪ್ಪಾಜಿಗೌಡರಿಗೆ ಇದೇ 16 ನೇ ತಾರೀಖಿನಿಂದ ಹತ್ತು ದಿವಸಗಳವರೆವಿಗೆ ಪ್ರಿವಿಲೇಜ್ ಲೀವ್ ಕೊಡಲಾಗಿದೆ. ಈ ಸಂದರ್ಭದಲ್ಲಿ ಸರ್ಕಾರದ ಅಡಿಷನಲ್ ಕಾರ್ಯದರ್ಶಿ ಶ್ರೀ ಎಸ್. ಮಾಧವರಾಯರು ಶ್ರೀ ಅಪ್ಪಾಜಿಗೌಡರ ಛಾರ್ಜಿನಲ್ಲಿರುವರು.

ದಿವಾನರಿಂದ ಅರಂಭೋತ್ಸವ

ಇದೇ 18, 19, 20, ರಲ್ಲಿ ನಡೆಯುವ ಶಾರದ ವಿಲಾಸ ಹೈಸ್ಕೂಲಿನ ರಜತೋತ್ಸವದ ಆರಂಭೋತ್ಸವವನ್ನು ಪ್ರಧಾನ ಶಿರೋಮಣಿ ಎಸ್. ಮಾಧವರಾಯರು ನೆರವೇರಿಸುವರು.

ಸಿಲೋನ್ ಯುವಕರಿಗೆ ಕಳಿಸಿರುವ ಸಂದೇಶದಲ್ಲಿ ಭಾರತ – ಲಂಕಾ ಒಮ್ಮತವಾಗಿರಬೇಕೆಂದು ತಿಳಿಸಿರುವರು.

o o

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನವು ಮುಂದಿನ ನವಾಹೆ 11, 12 ರಲ್ಲಿ ಕೇರ್ತಾಹಳ್ಳಿಯಲ್ಲಿ ನೆರವೇರುವುದು.

o o

ಶ್ರೀ ಪುಲ್ಲರೆಡ್ಡಿಯವರು ಈ ದಿವಸ ರಾಜಧಾನಿಗೆ ಆಗಮಿಸುವರು.

o o

ಬೊಂಬಾಯಿನ ಪರಿಸ್ಥಿತಿ ಸಂಪೂರ್ಣ ಶಾಂತಿಯುತವಾಗಿದೆ.